ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಖಿರ್ಗೆಯವರೂ ಮಂತ್ರಿಗಳಾಗಿದ್ದವರು. ಬಹಳ ಅನುಭವಸ್ಥರು.

ಅಧ್ಯಕ್ಷರು.—ಮಾನ್ಯ ರತ್ನಾಕರ್‌ರವರೇ ತಾವು ಓದುತ್ತೀರೋ ಇಲ್ಲವೊ.

ಶ್ರೀ ಧರ್ಮಸಿಂಗ್.—ಇಲ್ಲಿ. ಯಾರೂ ಮಂತ್ರಿಗಳಿದ್ದಾರೆ, ಅವರ ವಿಷಯದ ಬಗ್ಗೆ ನಿಯಮ ೩೩ಳಿರ ಕೆಳಗೆ ಎತ್ತುವುದಕ್ಕೆ ಅಲೋ ಮಾಡಿ.

ಅಧ್ಯಕ್ಷರು.—ಅವರಿಗೆ ಓದುವುದಕ್ಕೆ ಅವಕಾಶ ಕೊಡುತ್ತಿರೋ ಇಲ್ಲವೋ ?

SRI M. MALLIKARJUNA KHARGE.—Why the Ministers are absent ? What is the reason ? What is the urgent business they have got ? Have they given in writing to you about their absence, authorising some other Ministers to answer on behalf of them? ತಾವು ನಮಗೆ ಸಮಾಧಾನ ಮಾಡುತ್ತೀರೋ ಹೊರತಾಗಿ ಅವರ ಕಿವಿ ಹಿಂಡುವುದಕ್ಕೆ ತಯಾರಿಲ್ಲ. ನಮಗೆ ಮಾತ್ರ ಹೇಳುತ್ತಿದ್ದೀರಿ. We have given the Notices in writing and they should have been present here.

ಅಧ್ಯಕ್ಷರು.—ನೀವು ಓದಿ. ಮಾನ್ಯ ಮಂತ್ರಿಗಳ ಕಡೆಯಿಂದ ಕೆಲಸ ಮಾಡಿಸಿಕೊಳ್ಳುವುದು ಬೇಕಾಗಿಲ್ಲವೇ ?

(INTERRUPTION)

ಶ್ರೀ ಜಿ. ನಾರಾಯಣಕುಮಾರ್.—ಹಂಡುಗರಂ ಎಲ್ಲಾ ಸಂಮ್ಮನಿದ್ದಾಗೆ. ದೊಡ್ಡವರು ಏಕೆ ಕೂಗಾಡುವುದು.

ಅಧ್ಯಕ್ಷರು.—ನೀವು ಓದಿ.

VI. ಮಲೆನಾಡಿನಲ್ಲಿ ಉರುವಲು ಕಟ್ಟಿಗೆಯನ್ನು ಬಗೆಹರಿಸಲು ಅಸ್ಸ್ರ ಒಲೆಯನ್ನು ಸಬ್ಸಿಡಿ ದರದಲ್ಲಿ ಕೊಡುವುದು

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಮಲೆನಾಡಿನಲ್ಲಿ ಉರುವಲು ಕಟ್ಟಿಗೆ ಸಮಸ್ಯೆ ಬೆಚ್ಚಿದ್ದು, ಬಗಡಾಯಿಸಿರುವ ಈ ಸಮಸ್ಯೆಯನ್ನು ಕಡಿಮೆಗೊಳಿಸಲು ಸರಕಾರ ಸಬ್ಸಿಡಿ ದರದಲ್ಲಿ ಅಸ್ಸ್ರ ಒಲೆಯನ್ನು ಕೊಡುವುದು ಹಾಗೂ ಈ ಬಗ್ಗೆ ಗ್ರಾಮೀಣ ಜನರಲ್ಲಿ ತಿಳುವಳಿಕೆ ಮೂಡಿಸುವುದು ಅಗತ್ಯ. ಅಲ್ಲದೆ ಶಿವಮೊಗ್ಗ ಜಿಲ್ಲೆಯ ಗಾಜನೂರಿನಲ್ಲಿ ಸಾಮೂಹಿಕ ಗೋಬರ್ ಗ್ಯಾಸನ್ನು ಸ್ಥಾಪಿಸಿದಂತೆ ಹರಿಜನ ಕಾಲೋನಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸ್ಥಾಪಿಸಿ ಬರೆ ಸಮಸ್ಯೆ ಬಗೆಹರಿದೀತು. ಆದುದರಿಂದ ಸರಕಾರ ಈ ಬಗ್ಗೆ ಸೂಕ್ತ ಗಮನ ಹರಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಯಾವುದೇ ಒಂದು ಯೋಜನೆಯನ್ನು ಇಟ್ಟುಕೊಳ್ಳದೇ ಕಾಡನ್ನು ಕಡಿದು ಸಾಳು ಮಾಡಿದ್ದೇವೆ ಈಗ ಮಳೆ ಬರುತ್ತಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಕ್ಷಾಮವನ್ನು ನಾವು ಅನುಭವಿಸುತ್ತಿದ್ದೇವೆ. ೪೦-೫೦ ವರ್ಷಗಳಿಂದ ಮಾಡಿದ ಪಾಪವನ್ನು ನಾವು ಅನುಭವಿಸುತ್ತಿದ್ದೇವೆ. ಇದರಿಂದಾಗಿ ಅನಾವಶ್ಯಕವಾಗಿ ಸೌದೆಯನ್ನು ಕಡಿದು ಕಾಡನ್ನು ಹಾಳು ಮಾಡುವುದು ಬೇಡವೆಂದು ಸರಕಾರ ಕಾನೂನು ಮಾಡಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಸ್ಸ್ರ ಒಲೆ. ಗೋಬರ್ ಗ್ಯಾಸ್ ಒಲೆಗಳ ಬಳಕೆಯನ್ನು ಮಾಡಬೇಕಾಗುತ್ತದೆ. ಈಗಾಗಲೇ ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಿ ಇದನ್ನು ಹೆಚ್ಚು ಅಭಿವೃದ್ಧಿಗೊಳಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ವಿಧಾನಸಭೆಯ ಅಧಿವೇಶನ ಪ್ರಾರಂಭವಾದಮೇಲೆ ನಾನು ಸುಮಾರು ೮-೧೦ ನೋಟೀಸ್ ನಿಯಮ ೩೩ಳಿರ ಪ್ರಕಾರ ಕಳುಹಿಸಿಕೊಟ್ಟಿದೆ . ಅವುಗಳಿಗೆ ಒಂದಕ್ಕೂ ಉತ್ತರ ಬರದೇ ಇರುವುದರಿಂದ ಅದಕ್ಕೆ ಪ್ರತಿಭಟಿಸಿ ನಾನು ಇದನ್ನು ಓದದೆ ಸುಮ್ಮನೆ ಕಂಳಿತುಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಈಗ ನನ್ನ ಹತ್ತಿರ ಬಂದು ಕೇಳಿಕೊಂಡು ಹೋಗಿ, ಸುಮ್ಮನೆ ಕುಳಿತುಕೊಳ್ಳುತ್ತಿದ್ದಾರೆ

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಉತ್ತರ ಬೇಕಾಗಿಲ್ಲ ಎಂದು ಕಾಣುತ್ತದೆ.

(ಗೊಂದಲ)

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಕುಳಿತುಕೊಂಡು ಎಲ್ಲಾ ನೋಡಿಕೊಂಡು ಹೋಗಿ ನಾನು ಪ್ರಶ್ನೆ ಕೇಳುವುದಿಲ್ಲ ಎಂದು ಕುಳಿತುಕೊಂಡರೆ ಹೇಗೆ ?

VII. ಬಂಟ್ವಾಳ ತಾಲ್ಲೂಕಿನ ವಿಟ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯರನ್ನು ನೇಮಿಸುವುದೂ.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ವಿಟ್ಲದಲ್ಲಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು, ಇದರಲ್ಲಿ ಓರ್ವ ವೈದ್ಯಾಧಿಕಾರಿಗಳು ಮಾತ್ರ ಇದ್ದಾರೆ. ಈ ಆಸ್ಪತ್ರೆಗೆ ಹಿಂದಿನ ವರ್ಷಗಳಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡುತ್ತಾ ಬಂದಿದ್ದು, ಆದರೆ ಸಂಬಂಧಪಟ್ಟವರು ಕೆಲಸಕ್ಕೆ ಇದುವರೆವಿಗೂ ಹಾಜರಾಗಿಲ್ಲ. ಕಾರಣ ಏನೆಂದು ತಿಳಿಯದೆ ಆ ಪ್ರದೇಶದ ಸಾರ್ವಜನಿಕರು ತಂಬಾ ಬೇಸತ್ತಿದ್ದಾರೆ ಮತ್ತು ನಿರಾಶರಾಗಿದ್ದಾರೆ.

ಇತ್ತೀಚಿನ ಸುದ್ದಿಯಂತೆ ಈ ಬಾರಿಯೂ ಸಹ ಓರ್ವ ಮಹಿಳಾ ವೈದ್ಯಾಧಿಕಾರಿಯು ನೇಮಕಾತಿ ಆಗಿದೆ ಎಂದು ನನ್ನ ಗಮನಕ್ಕೆ ಬಂದಿದ್ದು ಅವರೂ ಸಹ ಇಹುವರೆಗೆ ಕೆಲಸಕ್ಕೆ ಹಾಜರಾಗಲಿಲ್ಲ. ವಿಟ್ಲ ನಗರ ಮಂತ್ತು ಆಸುಪಾಸಿಗೆ ಇದೊಂದೇ ಪ್ರಮುಖ ಆಸ್ಪತ್ರೆ ಇದ್ದು, ಇಲ್ಲಿ ಓರ್ವ ಮಹಿಳಾ ವೈದ್ಯಾಧಿಕಾರಿಯು ಅವಶ್ಯಕತೆ ತೀಫ್ರವಾಗಿದೆ. ಜನರ ಈ ಕೋರಿಕೆಯನ್ನು ಈಡೇರಿಸುವ ದಿಸೆಯಲ್ಲಿ ಮಾನ್ಯ ಸರಕಾರ ಸೂಕ್ತ ಕ್ರಮವನ್ನು ಶೀಫ್ರದಲ್ಲಿ ಕೈಕೊಳ್ಳುವ ಬಗ್ಗೆ ಆಶಿಸುತ್ತೇನೆ ಹಾಗೂ ಈ ಮೂಲಕ ಒತ್ತಾಯಿಸುತ್ತೇನೆ.

ಎರಡನೆಯದಾಗಿ. ಸದರಿ ಆಸ್ಪತ್ರೆಗೆ ಹೊಂದಿಕೊಂಡಂತೆ ಒಂದೂ ಶವ ಪರೀಕ್ಷಾಗಾರದ ಅವಶ್ಯಕತೆ ಇದ್ದು ಅದನ್ನು ಶೀಘ್ರದಲ್ಲಿ ವ್ಯವಸ್ಥೆಗೊಳಿಸಿಕೊಡಬೇಕಾಗಿ ವಿನಂತಿಸುತ್ತೇನೆ.

ವಿಟ್ಲ ಸರಕಾರಿ ಆಸ್ಪತ್ರೆಯನ್ನು ವಿಸ್ತರಿಸಿ, ಸುಮಾರು ೨೦ ಹಾಸಿಗೆಗಳ ವ್ಯವಸ್ಥೆಗೊಳಿಸುವ ಯೋಜನೆ ಸರಕಾರದ ಪರಿಶೀಲನೆಯಲ್ಲಿದ್ದು ಅದಕ್ಕಾಗಿ ಅಗತ್ಯವಿರುವ ಭೂಮಿಯನ್ನು ಸಹ ಕಾದಿರಿಸಲಾಗಿದೆ. ಈ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಗಳೇನೆಂದು ತಿಳಿಯಬಯಸುತ್ತೇನೆ. ಈ ವಿಸ್ತರಣಾ ಕಾರ್ಯವನ್ನು ಶೀಘ್ರದಲ್ಲಿ ಕಾರ್ಯಗತಗೊಳಿಸುವ ಬಗ್ಗೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಉತ್ತರವನ್ನು ತರಿಸಿ ಮಾನ್ಯ ಸದಸ್ಯರಿಗೆ ಕಳುಹಿಸುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದ್ದು, ಇಲ್ಲದೇ ಇದ್ದಹಾಗೆ ಇದ್ದಾರೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

VIII. ರಾಜ್ಯದಲ್ಲಿರುವ ಅಂಗವಿಕಲರಿಗೆ ಮಾಶಾಸನವನ್ನು ಕೊಡುವುದು.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೆ, ಕರ್ನಾಟಕದಲ್ಲಿ ಸುಮಾರು ೨೬ ಸಾವಿರ ಹಳ್ಳಿಗಳು ಇವೆ. ಸರ್ವೆ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಗಳಲ್ಲಿ ಪ್ರಕೃತಿಯಿಂದ ವಂಚಿತರಾದ ಅಂಗವಿಕಲರಾದ ಮಹಿಳೆಯರೂ, ಪುರುಷರೂ ಹಾಗೂ ಮಕ್ಕಳು ಇದ್ದಾರೆ. ಆದರೆ ಇವರೆಲ್ಲರಿಗೂ ಸರಕಾರದ